ಕಳೆಯುವಷ್ಟರಲ್ಲಿ ಅವನು ಮೂವತ್ತರ ಅಂಚಿಗೆ ಎಂದೋ ಬಂದು ನಿಂತಿದ್ದ. ಮದುವೆಯ ವಿಷಯ ಬಂದಾಗಲೆಲ್ಲಾ ಊರಿನ ಸುಂದರ ಹುಡುಗಿಯನ್ನು ಹುಡುಕುವ ಭಾರವನ್ನು, ಮದುವೆಯ ಹೊಣೆಯನ್ನು ಹೆತ್ತವರ ಮೇಲೆ ಹಾಕಿ ಅವನು ಮಾತ್ರ ನಿಶ್ಚಿಂತೆಯಿಂದಿದ್ದ. ಹೆಂಡತಿ ಬಂದ ನಂತರ ಮನೆಯನ್ನು ಅವಳಿಷ್ಟದಂತೆ ಅಲಂಕರಿಸುವ ಸ್ಪೇಸ್ ಒಂದನ್ನು ಬಿಟ್ಟು ಕೊಡುವ ಆಧುನಿಕ, ಉದಾತ್ತ ಗಂಡನಾಗುವ ಕನಸು ಹೊತ್ತಿದ್ದ ಅವನು ತನ್ನ ವಿನೂತನ ಮನೆಯನ್ನು ಶೃಂಗರಿಸುವ ಗೊಡವೆಗೆ ಹೋಗದೆ, ದಿನನಿತ್ಯದ ಕೆಲವು ಅಗತ್ಯಗಳಾದ ಒಂದೆರಡು ಕುರ್ಚಿಗಳು, ಟೀವಿ, ಕಂಪ್ಯೂಟರ್ ಇಡಲು ಟೇಬಲ್, ಮಾಸ್ಟರ್ ಬೆಡ್ ರೂಮ್‌ನಲ್ಲೊಂದು ಡಬಲ್ ಕಾಟ್‌ಗಳಲ್ಲಷ್ಟೇ ಸಂತೃಪ್ತನಾಗಿ ಆರಾಮವಾಗಿದ್ದ.

ಆದರೆ ಈಗ ಏನು ಯೋಚಿಸುವುದಕ್ಕೂ ಸಮಯವಿಲ್ಲ. ತನಗಿರುವ ಅತ್ಯಲ್ಪ ಕಾಲದಲ್ಲಿ, ಇನ್ನು ಮುಂದೆ ಎಲ್ಲವೂ ಗಡಿಯಾರದ ನಿರ್ದಿಷ್ಟ ಮುಳ್ಳಿನ ಲೆಕ್ಕಾಚಾರದಲ್ಲಿ ನಡೆಯಬೇಕಾದ್ದರಿಂದ ಮನೆಯ ಯಾವ ಮೂಲೆಯಿಂದ ಹಣಿಕಿದರೂ ಕಾಣುವ ಹಾಗೆ ಗಡಿಯಾರವನ್ನು ಹಾಲಿನ ಮಧ್ಯದ ವಿಶಿಷ್ಟ ಜಾಗದಲ್ಲಿ ತೂಗು ಹಾಕಿದ. ಒಳಗಿನ ಕೋಣೆಯಲ್ಲಿದ್ದ ಕಂಪ್ಯೂಟರ್ ಟೇಬಲ್, ಕುರ್ಚಿಯನ್ನು ಹಾಲಿಗೆ ದರದರ ಎಳೆದುಕೊಂಡು, ಗಡಿಯಾರದ ಎದುರು ಬಿಚ್ಚಿಕೊಂಡು, ಮೊಬೈಲ್‌ನಲ್ಲಿ ತನಗೀಗ ಉಳಿದಿರುವ ಸಮಯ ಲೆಕ್ಕಹಾಕತೊಡಗಿದ. ಹಗಲು ರಾತ್ರಿಗಳನ್ನು ಪ್ರತ್ಯೇಕಿಸಿ ನೋಡಿದರೂ, ನಿಮಿಷ ಸೆಕೆಂಡುಗಳನ್ನು ಬಿಡಿಯಾಗಿ ತೆಗೆದುಕೊಂಡರೂ, ಕರಾರುವಾಕ್ಕಾಗಿ ನೂರಾಅರವತ್ತೆಂಟು ಗಂಟೆಗಳು ಮಾತ್ರ ಉಳಿದಿದ್ದವು. ಈ ನೂರಾಅರವತ್ತೆಂಟು ಗಂಟೆಗಳಲ್ಲಿ ತುರ್ತಾಗಿ ಮಾಡಲೇಬೇಕಿದ್ದ ಕೆಲಸಗಳು ಏನೇನಿವೆ ಎಂದು ಯೋಚಿಸತೊಡಗಿದ. ಸಾಯುವುದಕ್ಕೆ ಮುಂಚೆ ಯಾವುದಕ್ಕೂ ಚ್ಯುತಿ ಬಾರದಂತಹ ವಿಶೇಷ ಕಾರ್ಯಕಲಾಪವನ್ನು ಹಚ್ಚಿಕೊಂಡವನಂತೆ ಲ್ಯಾಪ್‌ಟಾಪ್ ತೆರೆದು, ಯಾವುದೊಂದು ಸಣ್ಣ ವಿವರಗಳೂ ಮರೆಯಬಾರದೆಂದು ಹೊಳೆದ ಪ್ರತಿ ಮುಖ್ಯ ವಿಷಯ, ತನ್ನ ಮನದಲ್ಲಿ ಮೂಡಿದ ಗಳಿಗೆ, ಹೊತ್ತು, ದಿವಸಗಳಡಿಯಲ್ಲಿ ಅದನ್ನು ಸ್ಫುಟವಾಗಿ ಬರೆದು ಕ್ರಮಾನುಸಾರ ಪಟ್ಟಿ ಮಾಡಿದರೆ ಅನುಕೂಲವಾಗಬಹುದೆಂದು ಅನ್ನಿಸಿದ್ದೇ ತಡ ಕೀಲಿಮಣೆಯಲ್ಲಿ ಕುಟ್ಟಿದ:

ಪಾಯಿಂಟ್ ನಂಬರ್ ಒನ್: ದಿ.6.1.2016 ಬುಧವಾರ, ರಾತ್ರಿ 9.30

ಮೊಟ್ಟ ಮೊದಲು ಯಾವುದನ್ನು ದಾಖಲಿಸಬೇಕೆಂದು ಹೊಳೆಯದೆ ಹಾಗೇ ಎದುರಿನ ಗೋಡೆ ನೋಡುತ್ತಾ ಕೂತ. ಇದೀಗಷ್ಟೇ ನೇತು ಹಾಕಿಕೊಂಡ ಗಡಿಯಾರದ ಪಕ್ಕದ ಗೋಡೆ ಸೀಳು ಬಿಟ್ಟು, ಅಂಕುಡೊಂಕಾಗಿ ಕಿಟಕಿಯವರೆಗೂ ಸರಿದುಹೋಗಿತ್ತು. ಅದು ಮೊದಲೇ ಇತ್ತೇ, ಈಗ ಗೋಡೆಗೆ ಮೊಳೆ ಹೊಡೆಯುವ ತನ್ನ ಆತುರದ ಅಚಾತುರ್ಯದಲ್ಲಿ ಸಂಭವಿಸಿತೇ ಎಂದು ಕೂತಲ್ಲಿಂದ ಎದ್ದು ಗೋಡೆಯ ಸಮೀಪ ಹೋಗಿ ವೀಕ್ಷಿಸಿದ. ಅದು ಎಂದಿನಿಂದಲೂ ಇರುವ ಪುರಾತನ ಬಿರುಕಿನಂತೆ ಕಂಡು, ತನ್ನ ನವನವೀನ ಮನೆಯ ಗೋಡೆಯಲ್ಲೊಂದು ಬಿರುಕೇ! ಅದು ಹೇಗೆ ಇಷ್ಟು ದಿನವಾದರೂ ತನ್ನ ಕಣ್ಣಿಗೆ ಬಿದ್ದಿರಲಿಲ್ಲವೆಂದು ಆಶ್ಚರ್ಯಗೊಂಡ. ದುಬಾರಿ ಬೆಲೆಯ ಈ ಫ್ಲ್ಯಾಟಿನಲ್ಲೂ ಇಷ್ಟು ಬೇಗ ಬಿರುಕುಬಿಟ್ಟಿದೆಯೆಂದರೆ? ತಕ್ಷಣ ಮೊಬೈಲ್‌ನಲ್ಲಿ ಅದನ್ನು ಕ್ಲಿಕ್ಕಿಸಿ, ಎಂಥಾ ಜರೂರಿ ಕೆಲಸಕ್ಕಾಗಿ ಕೂತಿದ್ದೆ ಅನ್ನುವುದನ್ನೇ ಮರೆತು, ತನ್ನ ಫೇಸ್‌ಬುಕ್ ಅಕೌಂಟ್ ಓಪನ್ ಮಾಡಿ, 'ಎ ಕ್ರ್ಯಾಕ್ ಇನ್ ದಿ ಹೌಸ್' ಅನ್ನುವ ಶೀರ್ಷಿಕೆ ಕೊಟ್ಟು, 'ಇನ್ನೂ ವರುಷ ಕಳೆದಿಲ್ಲ. ಆಗಲೇ ಕೊಂಡ ಹೊಸ ಮನೆಗಳ ಗೋಡೆಗಳಲ್ಲಿ ಬಿರುಕುಬಿಡುವುದೆಂದರೆ? ಜೀವನದಲ್ಲಿ ಯಾವುದೂ ಶಾಶ್ವತವಲ್ಲ ಎಂಬ ಗೊಡ್ಡು ಮಾತುಗಳು ನಿಜವೆನ್ನಿಸಿದರೂ